**ಒ.ಎಸ್.ನಂ. 4/2020**
**PW-4**

**<u>(ಇಂದು ದಿನಾಂಕಃ 10-08-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. BS ವಕೀಲರಿಂದಃ</u>**

ವಯಸ್ಸಿನಲ್ಲಿ ನನಗಿಂತ ಶಿವರಾಯ ದೊಡ್ಡವನು. ಶಿವರಾಯನಿಗೆ ನಾಗಮ್ಮ ಮೊದಲನೇ ಹೆಂಡತಿ ಎರಡನೇ ಹೆಂಡತಿಯ ಹೆಸರು ಶಾರದಮ್ಮ. ಶಿವರಾಯ ಜೀವಂತ ಇರುವಾಗ ತನ್ನ ಎಲ್ಲಾ ಮಕ್ಕಳ ಮದುವೆಯನ್ನು ಮಾಡಿರುತ್ತಾನೆ ಎಂದರೆ ಸರಿ. ಶಿವರಾಯನ ಎರಡೂ ಕುಟುಂಬಗಳು ಬೇರೆ ಇದ್ದವು ಎಂದರೆ ಸರಿಯಲ್ಲ. ಕೇವಲ ಬೇರೆ ಬೇರೆ ಮನೆಗಳಲ್ಲಿ ವಾಸ ಇದ್ದರು, ಪಾಲು ವಿಭಾಗ ಆಗಿರಲಿಲ್ಲ. ಅವರು ಎಷ್ಟು ವರ್ಷಗಳಿಂದ ಬೇರೆ ಬೇರೆ ಆಗಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಶಿವರಾಯನಿಗೆ ಇಬ್ಬರ ಹೆಂಡರ ಮಕ್ಕಳ ಮದುವೆ ಮಾಡಲು ಸಾಲ ಬಹಳ ಮಾಡಿದ್ದರಿಂದ ಮಾಣಿಕಪ್ಪ ಚಂದ್ರಂಪಳ್ಳಿ ರವರಿಗೆ ಹೊಲವನ್ನು ಮಾರಾಟ ಮಾಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ.

2 ನೇ ಹೆಂಡತಿ ಗಂಡು ಮಕ್ಕಳು ವಯಸ್ಕರಾದ ನಂತರ ಚಿಂಚೋಳಿ ತಾಲೂಕಿನಲ್ಲಿ ಪಾರ್ಲೆ ಬಿಸ್ಕೇಟ್ ಏಜೆನ್ಸಿ ಪಡೆದಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಿಂದ ಗಳಿಸಿದ ಆದಾಯದಿಂದ ಪುನಃ ಮಾಣಿಕಪ್ಪ ಚಂದ್ರಂಪಳ್ಳಿ ರವರಿಗೆ ಮಾರಾಟ ಮಾಡಿದ ಜಮೀನನ್ನು ಕ್ರಯ ಪಡೆದು ನಾಮ ಮಾತ್ರಕ್ಕೆ ಶಿವರಾಯ ನ ಹೆಸರಿಗೆ ನೋಂದಣಿ ಮಾಡಿದ ವಿಷಯ ನನಗೆ ಗೊತ್ತಿಲ್ಲ.

ನಾಗಮ್ಮ ಶಿವರಾಯನ ವಿರುದ್ದ ಜೀವನಾಂಶ ಕೇಸು ಹಾಕಿದ್ದಳು ಎಂದರೆ ಸರಿ. ಆ ಪ್ರಕರಣದಲ್ಲಿ ನಾಗಮ್ಮಳಿಗೆ ಜೀವನಾಂಶ ಕೊಡದ ಕಾರಣ ಶಿವರಾಯ 2 ಸಾರಿ ಜೈಲಿಗೆ ಹೋಗಿರುತ್ತಾನೆ ಎಂದರೆ ಸರಿಯಲ್ಲ. ಪದೇ ಪದೇ ಜೈಲಿಗೆ ಹೋಗಬಾರದು ಎನ್ನುವ ಉದ್ದೇಶದಿಂದ ಶಿವರಾಯ ನಾಗಮ್ಮಳಿಗೆ ಜೀವನ ಪರ್ಯಂತ ಜೀವನಾಂಶ ನೀಡುವ ಸಲುವಾಗಿ 8ನೇ ಪ್ರತಿವಾದಿಗೆ ತನ್ನ ಹೊಲವನ್ನು ಮಾರಾಟ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಂತರ ನಾಗಮ್ಮ ಜೀವನಾಂಶ ಕೇಳುವುದನ್ನು ಬಿಟ್ಟಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. 8 ನೇ ಪ್ರತಿವಾದಿಯೇ ಆ ಹೊಲದ ಮಾಲೀಕ ಕಬ್ಜಾದಾರ ಇರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಜಮೀನು ಹಿರಿಯರ ಆಸ್ತಿ ಅಲ್ಲ ಎಂದರೆ ಸರಿಯಲ್ಲ. ನನಗೆ ಏನೂ ಗೊತ್ತಿಲ್ಲದಿದ್ದರೂ

ಸಹ ವಾದಿಗೆ ಮತ್ತು ನಾಗಮ್ಮಳ ಮಕ್ಕಳಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,

ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.